## ದಿ:19-2-2009 ರಂದು ಮಹಾನಗರಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ಎಂ ಮಾದಮ್ಮ ಇವರ ಅಧ್ಯಕ್ಷತೆಯಲ್ಲಿ ನಡೆದ ದಾವಣಗೆರೆ ಮಹಾನಗರಪಾಲಿಕೆಯ 2008-09 ನೇ ಸಾಲಿನ ಪರಿಷ್ಕೃತ ಹಾಗೂ 2009-10ನೇ ಸಾಲಿನ ಆಯ-ವ್ಯಯ ಮಂಡನಾ ಸಭೆಯ ನಡವಳಿಕೆಗಳು

– – –

ಹಾಜರಾದ ಸದಸ್ಯರು:38 ಒಟ್ಟು ಸದಸ್ಯರು:45 ಗೈರು ಹಾಜರಾದ ಸದಸ್ಯರು:6

27ನೇ ವಾರ್ಡಿನ ಸದಸ್ಯರ ಸ್ಥಾನವು ತೆರವಾಗಿದೆ

00000 00000 00000

**ವಿಷಯ ಸಂ.1**

ದಾವಣಗೆರೆ ಮಹಾನಗರಪಾಲಿಕೆಯ 2008-09ನೇ ಸಾಲಿನ ಪರಿಷ್ಕೃತ ಹಾಗೂ 2009-10ನೇ ಸಾಲಿನ ಆಯ-ವ್ಯಯ ಅಂದಾಜು ಪಟ್ಟಿಯ ಮಂಡನೆ ಮತ್ತು ಚರ್ಚೆ

**ತೀರ್ಮಾನ**

ಪ್ರಾರಂಭದಲ್ಲಿ ಪೂಜ್ಯ ಮಹಾಪೌರರು ಬಜೆಟ್ ಅಧಿವೇಶನಕ್ಕೆ ಎಲ್ಲರನ್ನೂ ಸ್ವಾಗತಿಸಿದರು.

ತೆರಿಗೆ, ಹಣಕಾಸು ಹಾಗೂ ಮೇಲ್ಮನವಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ ಜಿ ಬಕ್ಕೇಶ್‌ರವರು ದಾವಣಗೆರೆ ಮಹಾನಗರಪಾಲಿಕೆಯ 2009-10ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರವನ್ನು ಮಂಡಿಸಿದರು.

2009-10ನೇ ಸಾಲಿನ ಆಯ-ವ್ಯಯ ಮುಂಗಡ ಪತ್ರದ ವಿವರ ಈ ಕೆಳಕಂಡಂತಿದೆ.

| | | |
|---|---|---|
| ಎ | **ಆರಂಭಿಕ ನಗದು ಮತ್ತು ಬ್ಯಾಂಕ್ ಶಿಲ್ಕು** | |
| | ನಗದು ಮತ್ತು ಬ್ಯಾಂಕ್ ಶಿಲ್ಕು | 36,03,66,527 |
| **ಬಿ** | **ರಾಜಸ್ವ ಖಾತೆ** | |
| ಬಿ1 | ರಾಜಸ್ವ ಜಮೆಗಳು | 67,87,02,000 |
| ಬಿ2 | ರಾಜಸ್ವ ಪಾವತಿಗಳು | 48,03,62,437 |
| | **ರಾಜಸ್ವ ಖಾತೆಯ ಮೇಲೆ ನಗದು ಉಳಿತಾಯ (ಕೊರತೆ)** | 19,83,39,563 |
| ಸಿ | ಬಂಡವಾಳ ಖಾತೆ | |
| ಸಿ1 | ಬಂಡವಾಳ ಜಮೆಗಳು | 197,81,75,700 |
| ಸಿ2 | ಬಂಡವಾಳ ಪಾವತಿಗಳು | 215,98,25,700 |
| | **ಬಂಡವಾಳ ಖಾತೆಯ ಮೇಲೆ ನಗದು ಉಳಿತಾಯ (ಕೊರತೆ)** | -18,16,50,000 |
| ಡಿ | ಅಸಾಮಾನ್ಯ ಖಾತೆ | |
| ಡಿ1 | ಅಸಾಮಾನ್ಯ ಜಮೆಗಳು | 175,13,81,999 |
| ಡಿ2 | ಅಸಾಮಾನ್ಯ ಪಾವತಿಗಳು | 212,31,58,946 |
| | **ಅಸಾಮಾನ್ಯ ಖಾತೆಯ ಮೇಲೆ ಉಳಿತಾಯ (ಕೊರತೆ)** | -37,17,76,947 |
| ಇ | ಒಟ್ಟು ನಗದು ಉಳಿತಾಯ (ಕೊರತೆ) | -35,50,87,384 |
| | ಅಂತಿಮ ನಗದು ಮತ್ತು ಬ್ಯಾಂಕ್ ಶಿಲ್ಕು | **52,79,143** |

ಮೇಲ್ಕಂಡ ಮುಂಗಡ ಪತ್ರದ ಮೇಲೆ ಚರ್ಚೆ ನಡೆದು ವಿರೋಧ ಪಕ್ಷದ ನಾಯಕರಾದ ಶ್ರೀ ಕೆ ಜಿ ಶಿವಕುಮಾರ್, ಸದಸ್ಯರಾದ ಶ್ರೀ ದಿನೇಶ್ ಕೆ ಶೆಟ್ಟಿ, ಶ್ರೀ ರಮೇಶ್ ಶಿವನಹಳ್ಳಿ, ಶ್ರೀ ಮುನ್ನಾ ಪೈಲ್ವಾನ್, ಶ್ರೀ ಬಾ ಮ ಬಸವರಾಜಯ್ಯ ಮತ್ತು ಶ್ರೀ ಬಿ ಲೋಕೇಶ್‌ರವರು ಮಾತನಾಡಿದರು. ಲೆಕ್ಕಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಟಿ ಜೆ ಸುಧಾ ಜಯರುದ್ರೇಶ್ ರವರು ಮಾತನಾಡಿ 2009-10ನೇ ಸಾಲಿಗೆ ಅತ್ಯುತ್ತಮ ಆಯ-ವ್ಯಯ ನೀಡಲಾಗಿದೆ ಎಂದು ಶ್ಲಾಘಿಸಿದರು.

ಮು ತಿ ನೋ

ವಿರೋಧ ಪಕ್ಷದ ನಾಯಕರಾದ ಶ್ರೀ ಕೆ ಜಿ ಶಿವಕುಮಾರ್, ಸದಸ್ಯರಾದ ಶ್ರೀ ದಿನೇಶ್ ಕೆ ಶೆಟ್ಟಿ, ಶ್ರೀ ರಮೇಶ್ ಶಿವನಹಳ್ಳಿ, ಶ್ರೀ ಬಾ ಮ ಬಸವರಾಜಯ್ಯನವರುಗಳು ಮಾತನಾಡಿ ಆಯ-ವ್ಯಯದಲ್ಲಿ ಅಳವಡಿಸಿಕೊಂಡಿರುವ ಕೆಲಸಗಳ ಬಗ್ಗೆ ಹಾಗೂ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಅನುದಾನ, ಯುಐಡಿಎಸ್ಎಸ್ಎಂಟಿ ಯೋಜನೆ ಹಾಗೂ ಕಾಮಗಾರಿಗಳ ಬಗ್ಗೆ, ಎಡಿಬಿ ಅನುದಾನ ಹಾಗೂ ಕಾಮಗಾರಿಗಳ ಬಗ್ಗೆ ಅನುದಾನವಿಲ್ಲದೇ ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ವಿರೋಧ ವ್ಯಕ್ತಪಡಿಸಿದರು.

ಸಭೆಯಲ್ಲಿ ಆಯ-ವ್ಯಯದ ಮೇಲೆ ಚರ್ಚಿಸಿ ಅಂತಿಮವಾಗಿ ಮೇಲ್ಕಂಡಂತೆ ರೂ.52.79 ಲಕ್ಷ ಮೊತ್ತದ ಉಳಿತಾಯ ಬಜೆಟ್ ಅನ್ನು ಸಭೆಯು ಬಹುಮತದಿಂದ ಅಂಗೀಕರಿಸಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಮಹಾಪೌರರು,
ಮಹಾನಗರಪಾಲಿಕೆ,ದಾವಣಗೆರೆ.